ಒಮ್ಮೆ ಅವನು ರಾಜನೊಬ್ಬನ ಅರಮನೆಯನ್ನು ಹೊಕ್ಕನು. ಆ ದೊರೆಗೂ ಜೋತಿಷ್ಯವೆಂದರೆ ಬಹಳ ನಂಬಿಕೆಯಿತ್ತು. ಹೊಸದಾಗಿ ಬಂದ ಆ ಜೋಯಿಸನನ್ನು ಕುರಿತು, ''ನನ್ನ ಆಯುಷ್ಯ ಇನ್ನೆಷ್ಟು ವರ್ಷ ಎಂಬುದನ್ನು ತಿಳಿದು ಹೇಳಿ ಜೋಯಿಸರೇ'' ಎಂದು ಕೇಳಿಕೊಂಡನು. ಜೋಯಿಸನಾದರೋ ಚೆನ್ನಾಗಿ ಲೆಕ್ಕಹಾಕಿ, ''ನಿಮ್ಮ ಆಯುಷ್ಯ ಇನ್ನು ಆರೇ ತಿಂಗಳು ಮಹಾಪ್ರಭು, ಏಳನೆಯ ತಿಂಗಳಿಗೆ ನೀವು ಸ್ವರ್ಗಸ್ಥರಾಗುತ್ತೀರಿ'' ಎಂದು ತೆಗೆದ ಬಾಯಿಗೆ ಹೇಳಿ ಅಲ್ಲಿಂದ ಹೊರಟುಬಿಟ್ಟನು. ಜ್ಯೋತಿಷಿಯ ಮಾತುಗಳು ದೊರೆಗೆ ಬರಸಿಡಿಲಿನಂತೆ ಎರಗಿದವು. ಅವನ ಜಂಘಾಬಲವೇ ಉಡುಗಿಹೋಯಿತು. ''ಅಯ್ಯೋ ನಾನು ಸತ್ತೆ, ಅಯ್ಯೋ ನಾನು ಕೆಟ್ಟೆ'' ಎಂದು ಕಂಗೆಟ್ಟು ಆಗಲೇ ಸಾವಿನ ಹಾಸುಗೆಯಲ್ಲಿ ಮಲಗಿಬಿಟ್ಟನು; ಕೊರಕೊರಗಿ ಕೋಳಿಯಾಗಿಬಿಟ್ಟನು.

ರಾಜನ ದುಃಸ್ಥಿತಿಯನ್ನು ಕಂಡ ವಿವೇಕಿಯಾದ ಅವನ ಮಂತ್ರಿಯು, ''ಪ್ರಭುಗಳೇ, ಆ ಜೋತಿಷ್ಯವನ್ನೆಲ್ಲಾ ನಂಬಬೇಡಿ; ಅವೆಲ್ಲ ಸುಳ್ಳುಪೊಳ್ಳುಗಳು. ಕಾಕತಾಳನ್ಯಾಯವೆನ್ನುತ್ತಾರಲ್ಲ, ಹಾಗೆ ಎಲ್ಲೋ ಒಮ್ಮೆ ನಿಜವಾಗಿಬಿಟ್ಟರೆ, ಎಲ್ಲ ಸಂದರ್ಭಗಳಲ್ಲೂ ನಿಜವಾಗುತ್ತದೆ ಎಂದೇನೂ ನಿಗದಿಯಿಲ್ಲ. ಆ ಜೋಯಿಸನೊಬ್ಬ ಅವಿವೇಕಿ, ಮೂರ್ಖ. ನೀವು ಏಳನೆಯ ತಿಂಗಳಿಗೆ ಖಂಡಿತ ಸಾಯುವುದಿಲ್ಲ, ನಿಶ್ಚಿಂತರಾಗಿರಿ'' ಎಂದು ಸಾಂತ್ವನದ ಮಾತುಗಳನ್ನು ಹೇಳಿದನು. ಆದರೆ ದೊರೆಯ ಕಳವಳ ಮಾತ್ರ ದೂರವಾಗಲಿಲ್ಲ. ಆಗ ಮಂತ್ರಿಯು ಆ ಜೋಯಿಸನನ್ನು ಹುಡುಕಾಡಿಸಿ, ಮತ್ತೆ ಅರಮನೆಗೆ ಬರಮಾಡಿಕೊಂಡನು. ''ಜೋಯಿಸರೇ, ನೀವು ಹೇಳಿರುವ ಮರಣ ಶಾಸನದಿಂದ ನಮ್ಮ ಪ್ರಭುಗಳು ಬಹಳ ಕಂಗಾಲಾಗಿದ್ದಾರೆ, ನಿಮ್ಮ ಲೆಕ್ಕಾಚಾರವನ್ನೆಲ್ಲಾ ಇನ್ನೊಮ್ಮೆ ಪರೀಕ್ಷೆಮಾಡಿ ನೋಡುತ್ತೀರಾ?'' ಎಂದು ವಿನಂತಿಸಿಕೊಂಡನು. ಆ ಜೋಯಿಸನಿಗಂತೂ ತನ್ನ ಲೆಕ್ಕಾಚಾರದ ಮೇಲೆ ನೂರಕ್ಕೆ ನೂರು ನಂಬಿಕೆಯಿತ್ತು. ಆದರೂ ಮಂತ್ರಿಯ ಆಜ್ಞೆಯ ಪರಿಪಾಲನೆಗಾಗಿ, ಪುನಃ ದೀರ್ಘಕಾಲ ಲೆಕ್ಕಾಚಾರ ಮಾಡಿ, ''ಎಲ್ಲವೂ ಸರಿಯಾಗಿದೆ ಮಂತ್ರಿಗಳೇ, ದೊರೆಗಳಿಗೆ ಆರು ತಿಂಗಳು ಕಳೆದು, ಏಳನೆಯ ತಿಂಗಳಿಗೆ ಸಾವು ಖಚಿತ'' ಎಂದು ಹಳೆಯ ರಾಗವನ್ನೇ ಹಾಡಿದನು. ಮರಣವಿಚಾರವನ್ನು ಹಾಗೆ ಮುಖಕ್ಕೆ ಹೊಡೆದಂತೆ ಹೇಳಬಾರದು ಎಂಬ ಪ್ರಾಥಮಿಕ ಪ್ರಜ್ಞೆಯೂ ಆ ಜೋಯಿಸನಲ್ಲಿರಲಿಲ್ಲ. ಆಗಂತೂ ಮಹಾರಾಜನು ಪಾತಾಳಕ್ಕೆ ಕುಸಿದುಹೋದನು.

ಆಮೇಲೆ ಮಂತ್ರಿಯು ಜೋಯಿಸನನ್ನೇ ಕುರಿತು, ''ನಿಮ್ಮ ಆಯುಷ್ಯ ಎಷ್ಟು, ನೀವು ಇನ್ನೆಷ್ಟು ವರ್ಷ ಬದುಕುತ್ತೀರಿ ಎಂಬುದನ್ನೆಲ್ಲ ಏನಾದರೂ ನೀವು ಲೆಕ್ಕಹಾಕಿದ್ದೀರಾ?'' ಎಂದು ಕೇಳಿದನು. ಆಗ ಜೋಯಿಸನು, ''ನನ್ನ ಜಾತಕದ ಪ್ರಕಾರ ನಾನು ಇಲ್ಲಿಂದ ಮುಂದಕ್ಕೆ ಹನ್ನೆರಡು ವರ್ಷ ಬದುಕಿರುತ್ತೇನೆ'' ಎಂದನು. ತಕ್ಷಣವೇ ಮಂತ್ರಿಯು ತನ್ನ ಸೊಂಟದಲ್ಲಿದ್ದ ಖಡ್ಗವನ್ನು ಸರಕ್ಕನೆ ಸೆಳೆದು, ಆ ಜೋಯಿಸನ ರುಂಡವನ್ನು ಕಚಕ್ಕನೆ ಕಡಿದುರುಳಿಸಿಬಿಟ್ಟನು. ದೊರೆಯು ಹೌಹಾರುತ್ತ, ''ಇದೇನು ಮಾಡಿಬಿಟ್ಟಿರಿ ಮಂತ್ರಿಗಳೇ!'' ಎಂದು ಚೀರಿದನು. ಆಗ ಮಂತ್ರಿಯು, ''ಸುಮ್ಮನಿರಿ ಮಹಾಪ್ರಭು, ಕಂಡಿದ್ದೇನೆ, ಹನ್ನೆರಡು ವರ್ಷ ಬದುಕಿರುತ್ತೇನೆಂದವನು ಹನ್ನೆರಡು ಗಳಿಗೆಯೂ ಬದುಕಲಿಲ್ಲ ನೋಡಿ, ಅವನು ನಿಮ್ಮ ಆಯುಷ್ಯವನ್ನು ಕುರಿತು ಹೇಳಿದ ಭವಿಷ್ಯವೆಲ್ಲವೂ ಬರೀ ಬುರುಡೆಯೆಂಬುದು ನಿಮ್ಮ ಮನಸ್ಸಿಗೆ ಈಗಲಾದರೂ ಬಂದಿತಲ್ಲವೆ?'' ಎಂದನು. ಆ ಘಟನೆಯಿಂದಾಗಿ ರಾಜನಿಗೆ, 'ಹೌದು, ಅವನು ಹೇಳಿದ ಭವಿಷ್ಯವೆಲ್ಲ ಸುಳ್ಳು' ಎಂದು ದೃಢಪಟ್ಟು ಮನಸ್ಸು ಶಾಂತವಾಯಿತು.

ಭರತಖಂಡವು ನೆಮ್ಮದಿಯಿಂದ ಬಾಳಬೇಕಾದರೆ ಸುಳ್ಳು ಭವಿಷ್ಯಗಳಿಂದ ನಾವು ಪ್ರಭಾವಿತರಾಗಬಾರದು. ನಮ್ಮ ಅದೃಷ್ಟವನ್ನು ಹುಡುಕಿಕೊಡಲು ತಾರೆಗಳ ತಂಟೆಯೇಕೆ! ಎಲ್ಲೋ ಕಿಂಚಿತ್ತು ಪ್ರಭಾವ ನಮ್ಮ ಮೇಲೆ ಆ ತಾರೆಗಳ ದೆಸೆಯಿಂದ ಇದ್ದರೂ, ಅದರಿಂದ ನಾವು ಭಯಗ್ರಸ್ತರಾಗಬಾರದು. ಯಾವುದು ನಮ್ಮ ಆಧ್ಯಾತ್ಮಿಕ, ಮಾನಸಿಕ ಮತ್ತು ದೈಹಿಕ ದೌರ್ಬಲ್ಯಕ್ಕೆ ಕಾರಣವಾಗುತ್ತದೆಯೋ, ಅದನ್ನು ನಮ್ಮ ಕಾಲು ಬೆರಳುಗಳಿಂದಲೂ ಮುಟ್ಟಬಾರದು. ಅದು ನಮ್ಮ ಶಕ್ತಿಯನ್ನು ಹ್ರಾಸಗೊಳಿಸುತ್ತದೆ. ಜೋತಿಷ್ಯ ಮುಂತಾದವುಗಳಲ್ಲಿ ಕಿಂಚಿತ್ತು ಸತ್ಯಾಂಶವಿದ್ದರೂ, ನಾವು ಅದನ್ನು ಅಸಡ್ಡೆಯಿಂದಲೇ ನೋಡಬೇಕು ಎಂದು ವಿವೇಕಾನಂದರು ಈ ಕಥಾಸಂದರ್ಭದಲ್ಲಿ ಹಣೇಬರಹದ ಹಣೇಬರಹವನ್ನೇ ಬರೆದಿಟ್ಟಿದ್ದಾರೆ. *

## ಅಹಲ್ಯಾಬಾಯಿಯ ವ್ಯಕ್ತಿತ್ವ

ನಮ್ಮ ಸಂಸ್ಕೃತಿಯ ಪುನರುತ್ಥಾನದಲ್ಲಿ ಹಲವು ಮಹತ್ಕಾರ್ಯಗಳನ್ನು ಮಾಡಿದ ಮಹಿಳೆ ಅಹಲ್ಯಾಬಾಯಿ ಹೋಳ್ಕರ್ ದೈವೀಸಂಪನ್ನೆ; ಸರಳ, ಗಂಭೀರ ವ್ಯಕ್ತಿತ್ವದವಳು. ಅವಳ ಬಳಿಗೊಬ್ಬ ಕವಿ ತನ್ನ ಕವಿತೆಯೊಂದಿಗೆ ಬಂದ; ಅವಳ ಗುಣಗಾನ ಮಾಡುವ ತನ್ನ ಕಾವ್ಯವನ್ನು ಓದತೊಡಗಿದ. ಅದನ್ನು ಕೇಳಿದ ಅಹಲ್ಯಾಬಾಯಿ, ''ನನ್ನ ಗುಣಗಾನದ ಹೊರತಾಗಿ ಈ ಕೃತಿಯಲ್ಲಿ ಬೇರೇನಿದೆ?'' ಎಂದು ಕೇಳಿದಳು. ''ತಾಯೆ, ಇದರಲ್ಲಿ ಆದಿಯಿಂದ ಅಂತ್ಯದವರೆಗೂ ತಮ್ಮ ಮಹಿಮೆಯ ವರ್ಣನೆಯಿದೆ. ತಾವು ಎಷ್ಟೊಂದು ದೊಡ್ಡವರು!'' ಎಂದ ಕವಿ, ಓದು ಮುಂದುವರಿಸಿದ. ಆಗ ತಡೆದ ಅಹಲ್ಯಾಬಾಯಿ, ''ಸಾಕುಮಾಡಿ. ಇಲ್ಲಿ ತನ್ನಿ ನಿಮ್ಮ ಕಾವ್ಯವನ್ನು!'' ಎಂದಳು. ತನ್ನ ಕಾವ್ಯವನ್ನು ಅವಳ ಮುಂದಿಟ್ಟು ಕೈಮುಗಿದು ನಿಂತ ಕವಿ ಮಹಾಶಯ. ಅಹಲ್ಯಾಬಾಯಿ ಗಂಭೀರವಾಗಿ, ''ನನ್ನನ್ನು ವರ್ಣಿಸುವ ಬದಲು ನಿಮ್ಮ ಲೇಖನಿಯು ಸರ್ವಶಕ್ತನಾದ ಭಗವಂತನನ್ನು ವರ್ಣಿಸಿದ್ದರೆ ನಿಮ್ಮ ಶ್ರಮ ಹಾಗೂ ಬದುಕು ಸಾರ್ಥಕವಾಗುತ್ತಿತ್ತು. ನೀವಿನ್ನು ಹೊರಡಿ, ನಿಮಗೇನೂ ಸಿಗದು. ಈ ಕಾವ್ಯವನ್ನು ನರ್ಮದೆಗೆ ಅರ್ಪಿಸಲಾಗುವುದು'' ಎಂದಳು. ಅದನ್ನು ನರ್ಮದೆಯಲ್ಲಿ ಮುಳುಗಿಸಲಾಯಿತು; ಕವಿ ಪೆಚ್ಚುಮೋರೆ ಹಾಕಿಕೊಂಡು ಹೊರಟುಹೋದ. *(ಸಂಗ್ರಹ)*